ಶ್ರೀಮಾತೆಯವರ ಪತ್ರಗಳು - ೧೯

ಅನುವಾದ: **ಪ್ರವ್ರಾಜಿಕಾ ಧರ್ಮಪ್ರಾಣಾ**

ಪತ್ರ - ೧೦೮

ಶ್ರೀ ಶ್ರೀ ದುರ್ಗಾ

೧೮ ಡಿಸೆಂಬರ್, ೧೯೧೩
UDBODHAN OFFICE
12, 13 Gopal Chandra Neogi Lane
Bagbazar P.O., CALCUTTA
ಪೌಷ ೩, ಗುರುವಾರ

ಶುಭವಾಗಲಿ.

ಮಗೂ, ನಿನ್ನ ಪತ್ರವು ಸಿಕ್ಕಿದೆ. ನಿನ್ನ ಮಾನಸಿಕ ಅವಸ್ಥೆ ಕೆಟ್ಟಿದೆ. ಮನಸ್ಸು ಮದ ಏರಿದ ಆನೆಯಂತೆ. ವಿಚಾರ ಮಾಡಿ ಮನಸ್ಸನ್ನು ಹಿಂದೆಳೆಯಬೇಕು, ಠಾಕೂರರನ್ನು ಪ್ರಾರ್ಥಿಸಬೇಕು. ಮನಸ್ಸಿನ (ಈ ರೀತಿಯ) ಅವಸ್ಥೆ ಸಾಧಾರಣವಾಗಿ ಎಲ್ಲರಿಗೂ ಬರುವುದು. ಇಲ್ಲಿ ಎಲ್ಲವೂ ಕ್ಷೇಮ. ನನ್ನ ಆರೋಗ್ಯ ಅಷ್ಟೇನೂ ಚೆನ್ನಾಗಿಲ್ಲ, ಅಷ್ಟಾಗಿ ಕೆಟ್ಟೂ ಇಲ್ಲ.. ಒಂದು ರೀತಿ ಇದ್ದೇನೆ. ರಾಧು ಈಗ ಸದ್ಯ ಚೆನ್ನಾಗಿದ್ದಾಳೆ. ಮತ್ತೆ ಎಲ್ಲರೂ ಕ್ಷೇಮ. ಇನ್ನು ಹೆಚ್ಚೇನು ಬರೆಯಲಿ? ನಿಮಗೆಲ್ಲರಿಗೂ ನನ್ನ ಆಶೀರ್ವಾದಗಳು ಹಾಗೂ ಮಕ್ಕಳಿಗೆಲ್ಲ ನನ್ನ ಆಶೀರ್ವಾದವನ್ನು ತಿಳಿಸು. ಇತಿ,

ನಿನ್ನ ಶ್ರೀಮಾತೆ

ಪತ್ರ ಪಡೆದವರು
ನಿಶಿಕಾಂತ ಮಜುಮ್‌ದಾರ್

ಪತ್ರ - ೧೦೯

ಶ್ರೀ ಶ್ರೀ ದುರ್ಗಾಮಾತಾ

೩೧.೧೨.೧೯೧೩
ಪೌಷ ೬, ರವಿವಾರ

ಶುಭವಾಗಲಿ.

ತಾಯಿ ಸರಯೂ,

ಈಗ ತಾನೇ ಪತ್ರ ಸಿಕ್ಕಿ ಆನಂದವಾಯಿತು. ನಿನ್ನೆ ನನ್ನ ಜನ್ಮ ದಿನಕ್ಕೆ ಶರತ್ ಔತಣ ಕೊಡಿಸಿದ್ದ. ಮತ್ತೆ ಇಲ್ಲಿ ಎಲ್ಲರೂ ಚೆನ್ನಾಗಿದ್ದಾರೆ. ಅಲ್ಲಿಯೂ (ಎಲ್ಲರೂ) ಚೆನ್ನಾಗಿದ್ದಾರೆಂದು ಕೇಳಿ ಸಮಾಧಾನವಾಯಿತು. ಇನ್ನೇನು ಬರೆಯಲಿ? ನಿಮಗೆಲ್ಲಾ ನನ್ನ ಆಶೀರ್ವಾದಗಳು.

ಇತಿ ನಿನ್ನ ಮಾತೃದೇವಿ

ಪತ್ರ ಪಡೆದವರ ಹೆಸರು ಮತ್ತು ವಿಳಾಸ
Sriman Taraknath Roy Chowdhury
Sub Registrar
Manahardi , (Dacca)

(ಸೂಚನೆ: ಪತ್ರ - ೧೧೦ ಹಿಂದಿನ ಸಂಚಿಕೆಯಲ್ಲಿ ಪ್ರಕಟವಾಗಿದೆ.)

ಪತ್ರ - ೧೧೧

The Udbodhan Office
12, 13 Gopal Chanra Neogi's Lane
Baghbaz ar , Calcatta
Dated ಫಾಲ್ಗುಣ ೨೪, ೧೯೧೪
೯.೩.೧೯೧೪

ಶುಭವಾಗಲಿ.

ನಿನ್ನ ಪತ್ರದಲ್ಲಿ ನಿಮ್ಮೆಲ್ಲರ ಕುಶಲ ವಾರ್ತೆ ಅರಿತು ಸಮಾಧಾನವಾಯಿತು. ನಾವೆಲ್ಲರೂ ಚೆನ್ನಾಗಿದ್ದೇವೆ, ನಿಮಗೆಲ್ಲರಿಗೂ ನನ್ನ ಆಶೀರ್ವಾದಗಳು.

ಇತಿ ಆಶೀರ್ವಾದ ನೀಡುತ್ತಿರುವ
ನಿನ್ನ ಮಾತೃದೇವಿ

ಪತ್ರ ಪಡೆದವರ ಹೆಸರು ಮತ್ತು ವಿಳಾಸ ಸಿಕ್ಕಿಲ್ಲ

ಪತ್ರ - ೧೧೨

೧೪.೪.೧೯೧೪
ವೈಶಾಖ ೫ , ಕಲ್ಕತ್ತಾ

ಶುಭವಾಗಲಿ,

ಮಗೂ, ನಿನ್ನ ಪತ್ರವು ಸಿಕ್ಕಿ ಸಮಾಧಾನವಾಯಿತು. ನಿನಗೆ ನನ್ನ ಆಶೀರ್ವಾದ. ಯಾರೆಲ್ಲಾ ಭಕ್ತರು ಜನರಿಗೆ ಸಹಾಯ ಮಾಡುತ್ತಿರುವರೋ ಅವರಿಗೆಲ್ಲ ನನ್ನ ಆಶೀರ್ವಾದವನ್ನು ತಿಳಿಸು. ಈ ಕೆಲಸಕ್ಕೆ ಸಮಾನ ಇನ್ನೇನಿದೆ? ಶ್ರೀ ಠಾಕೂರರು ನಿಮಗೆಲ್ಲ ಮಂಗಳವನ್ನುಂಟುಮಾಡಲಿ. ನಾನು ಒಂದು ರೀತಿ ಚೆನ್ನಾಗಿದ್ದೇನೆ. ನಿಮ್ಮೆಲ್ಲರ ಕ್ಷೇಮಕ್ಕಾಗಿ ಪ್ರಾರ್ಥನೆ ಮಾಡುತ್ತಿದ್ದೇನೆ.

ಆಶೀರ್ವಾದ ಮಾಡುತ್ತಿರುವ,

ನಿಮ್ಮೆಲ್ಲರ ಶ್ರೀಮಾತೆ

ಪತ್ರ ಪಡೆದವರ ಹೆಸರು ಮತ್ತು ವಿಳಾಸ
ಶ್ರೀಮಾನ್ ಸುರೇಂದ್ರನಾಥ ಗುಪ್ತ
ಪೋ: ಶ್ರೀಹಟ್ಟ – ಮಿರಾಬಜಾರ್
ಜಿಲ್ಲೆ: ಶ್ರೀಹಟ್ಟ

ಪತ್ರ – ೧೧೩

೧೮.೪.೧೯೧೪
ಉದ್ಬೋಧನ ಕಾರ್ಯಾಲಯ
೧೨, ೧೩ ನಂ. ಗೋಪಾಲಚಂದ್ರ ನಿಯೋಗಿ ಲೇನ್
ಬಾಗ್‌ಬಜಾರ್ ಪೋ: ಕಲ್ಕತ್ತಾ
ವೈಶಾಖ ೫

ಶುಭವಾಗಲಿ,

ಮಗೂ, ನಿನ್ನ ಪತ್ರವು ಸಿಕ್ಕಿ ಸಂತೋಷವಾಯಿತು. ನೀನು ಚೆನ್ನಾಗಿರುವೆ ಎಂದು ಕೇಳಿ ಸಮಾಧಾನವಾಯಿತು. ಅವರ ಪಾದ ಪದ್ಮದಲ್ಲಿ ನಿನ್ನ ಮನಸ್ಸು ನೆಲೆಸಿರಲಿ ಮತ್ತು ನೀನು ಚೆನ್ನಾಗಿರು — ಇದನ್ನೇ ಆಶೀರ್ವಾದ ಮಾಡುತ್ತಿದ್ದೇನೆ. ಇದರ ಜೊತೆಯಲ್ಲಿ ನಿರ್ಮಾಲ್ಯ ಇಟ್ಟಿದ್ದೇನೆ. ತಲೆಯಲ್ಲಿ ಧರಿಸು. ಶ್ರೀ ಠಾಕೂರರ ಬಳಿ ಪ್ರಾರ್ಥಿಸುತ್ತಿದ್ದೇನೆ, ನಿನಗೆ ಮಂಗಳವಾಗಲಿ, ಭಕ್ತಿಯುಂಟಾಗಲಿ, ದೀರ್ಘಾಯುವಾಗು ಎಂದು. ಬದ್ರಿ ಷಾನಿಗೆ ನನ್ನ ಆಶೀರ್ವಾದ ಕೊಡು. ಮತ್ತು ಫ್ರಾಂಕ್‌ಗೆ ನನ್ನ ಆಶೀರ್ವಾದ ತಿಳಿಸು.

ಆಶೀರ್ವಾದ ನೀಡುತ್ತಿರುವ
ನಿನ್ನ ತಾಯಿ

ಪತ್ರ ಪಡೆದವರ ಹೆಸರು ಮತ್ತು ವಿಳಾಸ
Swami Shivanandaji Maharaj
chilkapita House , Almora

Note : ಲಾಲಾ ಬದ್ರಿ ಷಾ ಆಲ್ಮೋರದಲ್ಲಿ ವಾಸಿಸುತ್ತಿದ್ದ ಒಬ್ಬ ವ್ಯಾಪಾರಿ. ಮೇರಿ ಸಿ ಫಾಂಕಿ ಅಮೇರಿಕಾದ ಡೆಟ್ರೋಯೆಟ್ ನಲ್ಲಿ ವಾಸಿಸುತ್ತಿದ್ದ ಒಬ್ಬ ಭಕ್ತೆ.

ಪತ್ರ – ೧೧೪

ಶ್ರೀ ಶ್ರೀ ಹರಿ

೨.೧೦.೧೯೧೪
ಆಶ್ವಯುಜ ೧೦, ಶುಕ್ರವಾರ

ಪರಮ ಆಶೀರ್ವಾದಗಳು.

ತಾಯಿ, ನಿನ್ನ ಪತ್ರ ಸಿಕ್ಕಿ ಆನಂದವಾಯಿತು. ರಾಧು ಮೊದಲಾದವರು ಚೆನ್ನಾಗಿದ್ದಾರೆ. ನೀವೆಲ್ಲ ಚೆನ್ನಾಗಿರುವಿರೆಂದು ಕೇಳಿ ಸಮಾಧಾನವಾಯಿತು. ನಿಮಗೆಲ್ಲಾ ನನ್ನ ಆಶೀರ್ವಾದ. ಇನ್ನು ಹೆಚ್ಚೇನು ಬರೆಯಲಿ?

ಇತಿ
ನಿಮ್ಮೆಲ್ಲರ ತಾಯಿ

ಪತ್ರ ಪಡೆದವರ ಹೆಸರು ಮತ್ತು ವಿಳಾಸ
ಶ್ರೀಮತಿ ಸರಯೂ ಬಾಲಾ ದೇವಿ
C/121 , Hinu
Ranchi Secretariate

ಪತ್ರ – ೧೧೫

ಶ್ರೀ ಶ್ರೀ ಕಾಳಿಮಾತೆ

೨.೧೦.೧೯೧೪

ಚಿರಂಜೀವಿಯಾಗು.

ಸುರೇಂದ್ರ,

ನಿನ್ನ ವಿಜಯ ಪ್ರಣಾಮ ಸ್ವೀಕರಿಸಿದೆ. ಮತ್ತೆ ರಾಧುವಿನ ಕಾಯಿಲೆ ವಾಸಿಯಾಗಿಲ್ಲ. ನಾನು ಚೆನ್ನಾಗಿದ್ದೇನೆ ಮತ್ತು ನಿನಗೆ ನನ್ನ ಆಶೀರ್ವಾದ. ಇಲ್ಲಿ ಎಲ್ಲರೂ ಚೆನ್ನಾಗಿದ್ದಾರೆ.

ಇತಿ
ಶ್ರೀ ಶ್ರೀ ಮಾತೆ

ಪತ್ರ ಪಡೆದವರ ಹೆಸರು ಮತ್ತು ವಿಳಾಸ
ಶುಭಪ್ರದರಾದ
ಶ್ರೀಮಾನ್ ಸುರೇಂದ್ರನಾಥ ಗುಪ್ತ
ಪೋ : ಆ: ಕರೀಂಗಂಜ್
Govt. Agri. Farm, Sylhet

ಪತ್ರ – ೧೧೬

೧.೧೧.೧೯೧೪
Udbodhan Office
12, 13 Gopal chandra Neogi's Lane
ಕಾರ್ತಿಕ ೧೫

ಶುಭವಾಗಲಿ,

ಮಗೂ, ನಿನ್ನ ಪತ್ರವು ಸಿಕ್ಕಿದೆ. ಸೊಸೆಯಮ್ಮನಿಗೆ ಕಾಯಿಲೆಯಾಗಿದೆ ಎಂದು ಕೇಳಿ ದುಃಖವಾಯಿತು. ಶ್ರೀ ಠಾಕೂರರಿಗೆ ಪ್ರಾರ್ಥನೆ ಮಾಡುತ್ತಿದ್ದೇನೆ. ಶಸ್ತ್ರಕ್ರಿಯೆ ಮಾಡುವುದು, ಮಾಡದೆ ಇರುವುದು ಇದರ ಬಗ್ಗೆ ಡಾಕ್ಟರರ ಸಲಹೆಯಂತೆ ನಡೆಯಬೇಕು. ನನಗೆ ಈ ವಿಷಯದ ಬಗ್ಗೆ ಹೆಚ್ಚೇನೂ ಹೇಳಲು ಸಾಧ್ಯವಿಲ್ಲ.

ನಿನಗೆ ನನ್ನ ಆಶೀರ್ವಾದ ಹಾಗೂ ಸೊಸೆಯಮ್ಮನಿಗೂ ಮತ್ತು ಮಕ್ಕಳಿಗೂ ತಿಳಿಸು. ಇಲ್ಲಿ ಎಲ್ಲವೂ ಕ್ಷೇಮ.

ಇತಿ ಆಶೀರ್ವಾದ ನೀಡುತ್ತಿರುವ
ನಿನ್ನ ಮಾತೆ

ಪತ್ರ ಪಡೆದವರ ಹೆಸರು ಮತ್ತು ವಿಳಾಸ
Sj Taraknath Roy Chowdhury
Sub-Registrar
Monohardi P.O., Dacca